ಮಗು ಎಂದರೆ ಮನೆಯ ದೀಪ. ದೀಪಕ್ಕೆ ಪ್ರಜ್ವಲಿಸಲು ಎಣ್ಣೆ ಬೇಕಾಗುತ್ತದೆ. ಹಾಗೆಯೇ ಮಗು ಮಾನಸಿಕವಾಗಿ ಬೆಳೆಯಬೇಕೆಂದರೆ ಪಾಲಕರು ಒಳ್ಳೆಯ ಮಾರ್ಗದರ್ಶನ ನೀಡಬೇಕು. ಆಗಲೇ ಮಗು ಭವಿಷ್ಯದಲ್ಲಿ ಮನೆಗೆ ಬೆಳಕಾಗಿ ನಿಲ್ಲುವನು.
● **ಡಾ. ಬಸು ಬೇವಿನಗಿಡದ** ಸಾಹಿತಿ

ಕನ್ನಡಪ್ರಭ
ಬುಧವಾರ 10.12.2025
ಹುಬ್ಬಳ್ಳಿ

ಸುದ್ದಿ ಸಿಂಚನ

ಆರೋಪಿ ಪತ್ತೆಗೆ ಹೋದಾಗ 51 ಕೆಜಿ ಗಾಂಜಾ ವಶ

ಧಾರವಾಡ: ಅಕ್ರಮವಾಗಿ ಸ್ಪಿರೀಟ್ ಸಾಗಿಸಿದ್ದ ಆರೋಪಿಗಳ ಪತ್ತೆಗೆ ಪೊಲೀಸರು ತೆರಳಿದಾಗ ಬರೋಬ್ಬರಿ 51 ಕೆಜಿ ಗಾಂಜಾ ದೊರಕಿದ್ದು, ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕೊಲ್ಲಾಪುರದಿಂದ ಕೇರಳಕ್ಕೆ ನ.24ರಂದು ಅಕ್ರಮವಾಗಿ ಸ್ಪಿರೀಟ್ ಸಾಗಿಸುತ್ತಿದ್ದ ವೇಳೆ ತೇಗೂರ ಗ್ರಾಮದ ಬಳಿ ಪೊಲೀಸರು ದಾಳಿ ನಡೆಸಿ ನಡಸಿದಾಗ ಆರೋಪಿಗಳು ಪರಾರಿಯಾಗಿದ್ದರು. ತಲೆಮರೆಸಿಕೊಂಡಿದ್ದ ಆರೋಪಿಗಳ ಪತ್ತೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಆರೋಪಿಗಳ ಪತ್ತೆಗೆ ಬಲೆ ಬೀಸಿದಾಗ ಅವರು ಆನೇಕಲ್ ತಾಲೂಕಿನ ಸೂರ್ಯ ನಗರದ ಬಾಡಿಗೆ ಮನೆಯಲ್ಲಿ ಇರುವುದು ತಿಳಿದುಬಂದಿತ್ತು. ಈ ವೇಳೆ ದಾಳಿ ಪೊಲೀಸರು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ಮನೆ ಪರಿಶೀಲಿಸಿದ್ದರು. ಈ ವೇಳೆ 54.460 ಕೆಜಿ (₹ 12,86,500 ಮೌಲ್ಯ) ಮಾದಕ ಗಾಂಜಾ ಪತ್ತೆಯಾಗಿದೆ. ಜತೆಗೆ ತೂಕ ಮಾಡುವ ಡಿಜಿಟಲ್ ಮಶೀನ್, 3 ಮೊಬೈಲ್ ವಶಪಡಿಸಿಕೊಳ್ಳಲಾಗಿದೆ. ಇದೀಗ ಆರೋಪಿ ಗಳನ್ನು ಧಾರವಾಡಕ್ಕೆ ಕರತಂದು ಡಿ.6ರಂದು ನ್ಯಾ ಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿತರನ್ನು ಪತ್ತೆ ಮಾಡುವಲ್ಲಿ ಪಿಎಸ್‌ಐಗಳಾದ ಎಸ್.ಪಿ. ಉನ್ನದ, ಬಸವರಾಜ ಯದ್ದಲಗುಡ್ಡ, ಸಿಬ್ಬಂದಿ ಯು.ಆರ್. ಸಂಪಗಾಂವಿ, ವಿಜಯ ಉಪ್ಪಿನ, ಆರ್.ಕೆ. ಕೊಪ್ಪದ, ಪಿ.ಎಸ್. ಟಕ್ಕಳಕಿ, ಪ್ರಸಾದ ಬಡಿಗೇರ, ಸೋಮು ರಾಠೋಡ, ಜಿಲ್ಲಾ ಸಿಡಿಆರ್‌ವಿಭಾಗದ ಸಿಬ್ಬಂದಿ ವಿಠಲ ಡಂಗನವರ, ರವೀಂದ್ರ ಪಟೇದ್ ತಂಡದಲ್ಲಿದ್ದರು.

ಸ್ಮಾರ್ಟ್ ಇಂಡಿಯಾ ಹ್ಯಾಕ್‌ಥಾನ್‌ಗೆ ಆತಿಥ್ಯ ಒದಗಿಸಿದ ಐಐಐಟಿ

ಧಾರವಾಡ: ದೇಶದ ಅತ್ಯಂತ ಪ್ರತಿಷ್ಠಿತ ರಾಷ್ಟ್ರೀಯ ನಾವೀನ್ಯತೆ ಕಾರ್ಯಕ್ರಮಗಳಲ್ಲಿ ಒಂದಾಗಿರುವ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ (ಎಸ್‌ಐಎಚ್)-2025ರ ಸಾಫ್ಟವೇರ್ ಆವೃತ್ತಿಯ ಗ್ರ್ಯಾಂಡ್ ಫಿನಾಲೆಗೆ ಆತಿಥ್ಯ ಒದಗಿಸುತ್ತಿರುವ 60 ಭಾರತೀಯ ಸಂಸ್ಥೆಗಳಲ್ಲಿ ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿ) ಸಹ ಒಂದಾಗಿದೆ. ಇಲ್ಲಿಯ ಐಐಐಟಿ ಸಂಸ್ಥೆಯಲ್ಲಿ ಕಳೆದ ಎರಡು ದಿನಗಳ ಕಾಲ ಗ್ರ್ಯಾಂಡ್ ಫಿನಾಲ್ ಕಾರ್ಯಕ್ರಮದಲ್ಲಿ 20 ವಿವಿಧ ಸಂಸ್ಥೆಗಳಿಂದ 160 ಸ್ಪರ್ಧಿಗಳು ಭಾಗವಹಿಸಿದ್ದರು. ಉದ್ಯಮ ಮತ್ತು ಶಿಕ್ಷಣ ಕ್ಷೇತ್ರಗಳ 12 ನಿಪುಣರನ್ನು ಒಳಗೊಂಡ ನ್ಯಾಯಮಂಡಳಿಯು ಸ್ಪರ್ಧೆಯ ಮೌಲ್ಯಮಾಪನ ಮಾಡಿದೆ. ಕಾರ್ಯಕ್ರಮ ಸಂಯೋಜಕ ಡಾ. ರಾಜೇಶ್ ಎನ್.ಎಸ್. ಎಸ್‌ಐಎಚ್ ಧ್ಯೇಯಗಳು, ವಿದ್ಯಾರ್ಥಿಗಳಲ್ಲಿ ನಾವೀನ್ಯತೆ ಮತ್ತು ಪ್ರಾಯೋಗಿಕ ಸಮಸ್ಯೆ-ಪರಿಹಾರ ಕೌಶಲ್ಯ ಬೆಳೆಸುವಲ್ಲಿ ಅದರ ಪಾತ್ರವನ್ನು ವಿವರಿಸಿದರು. ಐಐಐಟಿ ಧಾರವಾಡ ನಿರ್ದೇಶಕ ಪ್ರೊ. ಮಹಾದೇವ ಪ್ರಸನ್ನ, ಭಾಗವಹಿಸಿದ ವಿದ್ಯಾರ್ಥಿ ಮತ್ತು ತಂಡಗಳಿಗೆ ಧೈರ್ಯವಾಗಿ ಯೋಚಿಸಲು ಮತ್ತು ಸೃಜನಶೀಲವಾಗಿ ಸಮಸ್ಯೆಗಳನ್ನು ಬಗೆಹರಿಸಲು ಪ್ರೋತ್ಸಾಹಿಸಿದರು. ನೋಡಲ್ ಕೇಂದ್ರದ ಮುಖ್ಯಸ್ಥ ಸೌರಭ್ ಉಬಾಲೆ ಉಪನ್ಯಾಸ ನೀಡಿದರು. ಸಂಯೋಜಕ ಡಾ. ಗಿರೀಶ್ ರೇವಡಿಗರ್, ಆಡಳಿತ ಉಸ್ತುವಾರಿ ಪ್ರಾಧ್ಯಾಪಕ ಡಾ. ಕೆ. ಗೋಪಿನಾಥ್ ಮತ್ತು ರಿಜಿಸ್ಟ್ರಾರ್‌ಡಾ. ಮುರುಗಾನಂದಂ ಪೊನ್ನುಸ್ವಾಮಿ ಹಾಗೂ ಸಂಪರ್ಕಾಧಿಕಾರಿ ಪ್ರೊ. ವಾಸುದೇವ ಪಾರ್ವತಿ ಇದ್ದರು.

ಎಂ.ವೈ. ಪೀರಜಾದೆ ನಿಧನ

ಧಾರವಾಡ: ತಾಲೂಕಿನ ಮಂಡಿಹಾಳ ಗ್ರಾಪಂ ಮಾಜಿ ಅಧ್ಯಕ್ಷ, ಮುಗದ ಗ್ರಾಮದ ಶತಾಯುಷಿ ಎಂ.ವೈ. ಪೀರಜಾದೆ ಮಂಗಳವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ ಇದ್ದಾರೆ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಿಗಮದ ಹಡಪದ ಅಪ್ಪಣ್ಣ ಸಮಾಜದ ಅಧಿಕಾರಿಗಳ ಹಾಗೂ ನೌಕರರ ಸಂಘದ ಪ್ರಥಮ ಸಮ್ಮೇಳನ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಧಾರವಾಡದ ನರ್ಸಿಂಗ್ ಕಾಲೇಜಿನಲ್ಲಿ ಗರ್ಭದಿಂದ ಉಷ್ಣತೆಗೆ-ಕೌಶಲ್ಯ ಆಧಾರಿತ ನವಜಾತ ಶಿಶು ಆರೈಕೆ ವಿಷಯ ಕುರಿತ ನಡೆದ ಕಾರ್ಯಾಗಾರದಲ್ಲಿ ಸ್ತ್ರೀ ರೋಗ ಮತ್ತು ಪ್ರಸೂತಿ ವಿಭಾಗದ ಮುಖ್ಯಸ್ಥ ಡಾ. ಸುನಿಲ್, ವಿವಿ ಉಪ ಕುಲಸಚಿವ ಡಾ. ಅಜಂತಾ ಜಿ.ಎಸ್ ಇದ್ದರು.

ಧಾರವಾಡದ ವಿದ್ಯಾಗಿರಿಯ ಜೆಎಸ್‌ಎಸ್ ಕನ್ನಡ ಮಾಧ್ಯಮ ಪ್ರೌಢಶಾಲೆಯ ವಾರ್ಷಿಕ ಕ್ರೀಡಾಕೂಟದಲ್ಲಿ ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಪಾಂಡುರಂಗ ಅಂಕಲಿ, ಜೆಎಸ್‌ಎಸ್ ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಂಶುಪಾಲ ಮಹಾವೀರ ಉಪಾಧ್ಯೆ ಉಪಸ್ಥಿತರಿದ್ದರು.

ಸೌರ ಗ್ರಾಮಕ್ಕೆ ಸಿಗಲಿದೆ ಕೇಂದ್ರದ ₹ 1 ಕೋಟಿ!

ಸೋಲಾರ್ ಬಳಕೆ ಉತ್ತೇಜಿಸಲು ಕೇಂದ್ರ ಸರ್ಕಾರದಿಂದ ಮಹತ್ವದ ಯೋಜನೆ | ಹೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಯ 24 ಗ್ರಾಮಗಳು ಆಯ್ಕೆ

● **ಶಿವಾನಂದ ಗೊಂಬಿ**
ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ

ನವೀಕರಿಸಬಹುದಾದ ಇಂಧನ ಬಳಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಹೆಸ್ಕಾಂ ಮುಂದಾಗಿದೆ. ಈ ನಿಟ್ಟಿನಲ್ಲಿ 'ಮಾದರಿ ಸೌರ ಗ್ರಾಮ' ಎಂಬ ಹೊಸ ಯೋಜನೆ ಜಾರಿಗೊಳಿಸಿದ್ದು, ಈ ಸ್ಪರ್ಧೆಯಲ್ಲಿ ವಿಜೇತ ಗ್ರಾಮಕ್ಕೆ ಕೇಂದ್ರ ಸರ್ಕಾರದಿಂದ ₹ 1 ಕೋಟಿ ಬಹುಮಾನ ದೊರೆಯಲಿದೆ.

ಕೇಂದ್ರದ ಎನ್‌ಡಿಎ ಸರ್ಕಾರ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಬಹುದು ಎಂಬ ಮಹತ್ವದ ಉದ್ದೇಶ ಹೊಂದಿದೆ. ಈ ನಿಟ್ಟಿನಲ್ಲಿ ಪರ್ಯಾಯ ಇಂಧನಗಳ ಬಳಕೆ, ಉತ್ಪಾದನೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ಈ ನಿಟ್ಟಿನಲ್ಲಿ ಇದೀಗ ಸೌರಶಕ್ತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುವಂತಾಗಬೇಕು ಎಂಬ ಉದ್ದೇಶದಿಂದ ಮಾದರಿ ಸೌರಗ್ರಾಮ ಎಂಬ ಹೊಸ ಯೋಜನೆ ಪರಿಚಯಿಸಿದೆ. ಈ ಯೋಜನೆಯಡಿ ಹೆಸ್ಕಾಂ ವ್ಯಾಪ್ತಿಯಲ್ಲಿ 24 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಏನಿದು ಯೋಜನೆ?: ಗ್ರಾಮ ಪಂಚಾಯಿಗಳ ನೇತೃತ್ವದಲ್ಲಿ ವಸತಿ ಗ್ರಾಹಕರಿಗೆ ಪಿಎಂ ಸೂರ್ಯಘರ್ ಯೋಜನೆಯಡಿ ಚಾವಣಿ ಸೌರಶಕ್ತಿ ಅಳವಡಿಸುವುದು, ಇತರೆ ಗ್ರಾಹಕರಿಗೆ ಸಬ್ಸಿಡಿ ರಹಿತ ಯೋಜನೆಯಡಿ ಚಾವಣಿ ಸೌರಶಕ್ತಿ ಅಳವಡಿಸಲು ಪ್ರೋತ್ಸಾಹಿಸಲಾಗುವುದು. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಪಿಎಂ ಕುಸುಮ್ ಬಿ ಯೋಜನೆಯಡಿ ಸೌರ ಪಂಪ್‌ಸೆಟ್‌ಗೆ ಅಳವಡಿಕೆಗೆ ಒತ್ತು ನೀಡುವುದು. ಸರ್ಕಾರಿ ಕಟ್ಟಡಗಳ ಮೇಲೆ ಚಾವಣಿ ಅಳವಡಿಸಲು ಪ್ರೋತ್ಸಾಹಿಸುವ ಕಾರ್ಯ ಮಾಡಲಾಗುವುದು. (ಇದಕ್ಕೆ PPP/ESCO/ Budgetary grant model ಮೂಲಕ ಸಂಬಂಧಪಟ್ಟ ಇಲಾಖೆಗಳಿಗೆ ಅನುದಾನ ನೀಡಲಾಗುವುದು). ಕುಡಿಯುವ ನೀರಿನ ಹಾಗೂ ಬೀದಿ ದೀಪಗಳಿಗೆ ಸೌರಶಕ್ತಿ ಅಳವಡಿಸಲು ಪ್ರೋತ್ಸಾಹಿಸಲಾಗುವುದು.

ಹೀಗೆ ಆಯ್ಕೆಯಾದ ಗ್ರಾಮಗಳಲ್ಲಿ 6 ತಿಂಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಸೌರಶಕ್ತಿ ಬಳಕೆ ಹೆಚ್ಚಿಸುವುದು, ಅಷ್ಟು ಬಳಕೆ ಮಾಡುವಂತೆ ಮಾಡುವುದು, ಈ ಮೂಲಕ ಆ ಗ್ರಾಮಗಳಲ್ಲಿ ಸೌರ ಗ್ರಾಮಗಳನ್ನು ಪರಿವರ್ತಿಸುವ ಕೆಲಸ, ಯಾವ ಗ್ರಾಮ ಹೆಚ್ಚಿನ ಸೌರಶಕ್ತಿ ಬಳಕೆ ಮಾಡುತ್ತಿರುತ್ತದೆಯೋ ಆ ಗ್ರಾಮವನ್ನು ಮಾದರಿ ಸೌರ ಗ್ರಾಮವೆಂದು ಘೋಷಿಸುವುದು, ಆ ಗ್ರಾಮಕ್ಕೆ ಕೇಂದ್ರ ಸರ್ಕಾರದ ನವೀಕರಿಸಬಹುದಾದ ಇಂಧನ ಸಚಿವಾಲಯದಿಂದ (ಎಂಎನ್‌ಆರ್‌ಇ) ₹ 1 ಕೋಟಿ ಪ್ರೋತ್ಸಾಹಧನ (ಬಹುಮಾನ) ಲಭಿಸಲಿದೆ. ಒಂದು ವೇಳೆ ಎಲ್ಲ ಗ್ರಾಮಗಳೂ ಸೌರಗ್ರಾಮಗಳಾದರೆ ಎಲ್ಲ ಗ್ರಾಮಗಳಿಗೂ ಒಂದು ಕೋಟಿ ರೂ. ಪ್ರೋತ್ಸಾಹ ಧನ ಸಿಗಲಿದೆ. ಸೋಲಾರ್ ಗ್ರಾಮಗಳನ್ನಾಗಿಸಲು ಅರಿವು ಮೂಡಿಸುವ ಕೆಲಸವನ್ನು ಹೆಸ್ಕಾಂ ಮಾಡಲಿದೆ. ಸೋಲಾರ್ ವಿಲೇಜ್‌ನ ಮಾಹಿತಿ ಕುರಿತು ಬ್ಯಾನರ್, ಭಿತ್ತಿಪತ್ರ ಅಂಟಿಸಲಾಗುತ್ತಿದೆ. ಗ್ರಾಪಂ ಸಭೆಗಳಲ್ಲಿ ಈ ಕುರಿತು ಹೆಸ್ಕಾಂ ಸಿಬ್ಬಂದಿ ಮಾಹಿತಿ ನೀಡುತ್ತಿದ್ದಾರೆ. ಬೀದಿ ನಾಟಕದ ಮೂಲಕ ಪ್ರಚಾರ ಮಾಡಲಾಗುತ್ತಿದೆ.

> **ಹೆಸ್ಕಾಂ ವ್ಯಾಪ್ತಿಯ 24 ಗ್ರಾಮಗಳನ್ನು ಆಯ್ಕೆ ಮಾಡಿ ಸೌರಗ್ರಾಮಗಳನ್ನಾಗಿ ಪ್ರಯತ್ನಿಸಲಾಗುತ್ತಿದೆ. 24 ಗ್ರಾಮಗಳು ಸೌರಗ್ರಾಮಗಳಾದರೆ ಎಲ್ಲ ಗ್ರಾಮಗಳಿಗೂ ಕೇಂದ್ರ ಸರ್ಕಾರದಿಂದ ₹ 1 ಕೋಟಿ ಪ್ರೋತ್ಸಾಹ ಧನ ದೊರೆಯಲಿದೆ. ಹೆಸ್ಕಾಂ ಸೋಲಾರ್ ಬಳಸುವಂತೆ ಅರಿವು ಮೂಡಿಸುವ ಕೆಲಸ ಮಾಡುತ್ತಿದೆ.**
> ● **ಎಂ.ಎಲ್. ವೈಶಾಲಿ**
> ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ

- ಆಯ್ಕೆಯಾದ ಗ್ರಾಮಗಳಲ್ಲಿ 6 ತಿಂಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಸೌರಶಕ್ತಿ ಬಳಕೆ ಹೆಚ್ಚಿಸುವುದು, ಅಷ್ಟು ಬಳಕೆ ಮಾಡುವಂತೆ ಮಾಡುವುದು, ಈ ಮೂಲಕ ಆ ಗ್ರಾಮಗಳಲ್ಲಿ ಸೌರ ಗ್ರಾಮಗಳನ್ನು ಪರಿವರ್ತಿಸುವ ಕೆಲಸ
- ಗ್ರಾಮ ಪಂಚಾಯಿಗಳ ನೇತೃತ್ವದಲ್ಲಿ ವಸತಿ ಗ್ರಾಹಕರಿಗೆ ಪಿಎಂ ಸೂರ್ಯಘರ್ ಯೋಜನೆಯಡಿ ಚಾವಣಿ ಸೌರಶಕ್ತಿ
- ಸೋಲಾರ್ ಗ್ರಾಮಗಳನ್ನಾಗಿಸಲು ಅರಿವು ಮೂಡಿ ಸುವ ಕೆಲಸ ಹೆಸ್ಕಾಂ ಮಾಡಲಿದೆ.

ಆಯ್ಕೆಯಾದ ಗ್ರಾಮಗಳು: ಹೆಸ್ಕಾಂ ವ್ಯಾಪ್ತಿಯಲ್ಲಿ ಏಳು ಜಿಲ್ಲೆಗಳು ಬರುತ್ತಿದ್ದು 24 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಹಾವೇರಿ ಜಿಲ್ಲೆಯ ಆಡೂರು, ಅಕ್ಕಿಆಲೂರು, ಮಾಸಣಗಿ. ವಿಜಯಪುರದ ತೆಲಗಿ, ಮೊರಟಗಿ, ಹೊನ್ನಟಗಿ, ಕಾಖಂಡಕಿ. ಬಾಗಲಕೋಟೆಯ ತೊಗಲಬಾಗಿ, ನಂದಿಕೇಶ್ವರ. ಧಾರವಾಡದ ಹೆಬಸೂರ, ಯಲಿವಾಳ, ಹೆಬ್ಬಳ್ಳಿ, ಮಿಶ್ರಿಕೋಟಿ. ಉತ್ತರ ಕನ್ನಡದ ಬನವಾಸಿ, ರಾಮ ನಗರ, ಮಜಲಿ, ಹೆಬ್ಬೆ. ಬೆಳಗಾವಿಯ ಮುದಕವಿ, ಅಂಬಡಗಟ್ಟಿ, ಅಳಗವಾಡಿ, ಉಚಗಾಂವ್. ಗದಗ ಜಿಲ್ಲೆಯ ಸೊರಣಗಿ, ಬಿಂಕದಕಟ್ಟಿ ಮತ್ತು ಗೊಗೇರಿ ಗ್ರಾಮಗಳನ್ನು ಮಾದರಿ ಸೌರ ಗ್ರಾಮಗಳ ಸ್ಪರ್ಧೆಗೆ ಆಯ್ಕೆ ಮಾಡಲಾಗಿದೆ. ಇದರಲ್ಲಿ 6 ತಿಂಗಳವರೆಗೆ ಯಾವ ಗ್ರಾಮಗಳಲ್ಲಿ ಸೌರಶಕ್ತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿರುತ್ತಾರೋ ಆ ಗ್ರಾಮವನ್ನು ಮಾದರಿ ಸೌರ ಗ್ರಾಮವೆಂದು ಘೋಷಿಸಲಾಗುತ್ತಿದೆ ಎಂದು ಹೆಸ್ಕಾಂ ತಿಳಿಸುತ್ತಿದೆ.

ಇದರಿಂದ ಸೌರಶಕ್ತಿ ಬಳಕೆ ಬಗ್ಗೆ ಜನರಲ್ಲಿ ಅರಿವು ಉಂಟಾಗುತ್ತದೆ. ಈ ಗ್ರಾಮಗಳನ್ನು ನೋಡಿಕೊಂಡು ಸೌರಶಕ್ತಿ ಮಹತ್ವ ಅರಿತು ಅಕ್ಕಪಕ್ಕದ ಹಳ್ಳಿಗಳು ಸೌರಶಕ್ತಿ ಬಳಕೆಗೆ ಮುಂದಾಗುತ್ತವೆ. ಆಗ ಸಹಜವಾಗಿಯೇ ವಿದ್ಯುತ್ ಅವಲಂಬನೆ ಕಡಿಮೆಯಾಗುತ್ತಾ ಸಾಗುತ್ತದೆ. ಇದೇ ಕೇಂದ್ರ ಸರ್ಕಾರದ ಉದ್ದೇಶ. ಈ ಹಿನ್ನೆಲೆಯಲ್ಲಿ ಹೊಸ ಯೋಜನೆ ಮೂಲಕ ಸೋಲಾರ್ ಬಳಕೆಗೆ ಮುಂದಡಿ ಇಡಲಾಗಿದೆ ಎಂಬುದು ಅಧಿಕಾರಿಗಳ ಅಂಬೋಣ. ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎಂಬುದನ್ನು ಕಾಯ್ದು ನೋಡಬೇಕಷ್ಟೇ!

ವಾರ್ಡ್ ಸಭೆಗೆ ಸದಸ್ಯರ ಗೈರು: ಆಕ್ರೋಶ

ನವಲಗುಂದ ತಾಲೂಕಿನ ಶಾನವಾಡ ಗ್ರಾಮದಲ್ಲಿ ನಡೆದ ವಾರ್ಡ್ ಸಭೆಯಲ್ಲಿ ಪಾಲ್ಗೊಂಡ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ.

- ಸದಸ್ಯರಿಗೆ ಅವರ ಅಧಿಕಾರ ವ್ಯಾಪ್ತಿ, ಕರ್ತವ್ಯಗಳ ಬಗ್ಗೆ ತರಬೇತಿ ನೀಡಿದರೂ ಸಭೆಗಳಿಗೆ ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದಾರೆ.
- ಇವರ ಬೇಜವಾಬ್ದಾರಿ ಯಿಂದ ಗ್ರಾಮ ಅಭಿವೃದ್ಧಿಯಲ್ಲಿ ಕುಂಠಿತಗೊಂಡಿದೆ

● **ಕನ್ನಡಪ್ರಭ ವಾರ್ತೆ** ನವಲಗುಂದ

ಸರ್ಕಾರದ ಯೋಜನೆಗಳಿಗೆ ಫಲಾನುಭವಿಗಳನ್ನು ಗುರುತಿಸುವ ಕೆಲಸ ಗ್ರಾಮಸಭೆಯಲ್ಲಿ ಆಗಬೇಕಿದೆ. ಇಂತಹ ಮಹತ್ವದ ಸಭೆಗೆ ಸದಸ್ಯರೇ ಬಾರದಿದ್ದರೆ ಹೇಗೆ ಎಂದು ಶಾನವಾಡ ಗ್ರಾಮಸ್ಥರು ಗೈರಾದ ಗ್ರಾಪಂ ಸದಸ್ಯರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಹಾಳಕುಸುಗಲ್ ಗ್ರಾಪಂ ವ್ಯಾಪ್ತಿಯ ಶಾನವಾಡ ಗ್ರಾಮದಲ್ಲಿ ಮಂಗಳವಾರ ಕರೆಯಲಾಗಿದ್ದ ವಾರ್ಡ್ ಸಭೆಗೆ ಓರ್ವ ಸದಸ್ಯ ಮಾತ್ರ ಬಂದಿದ್ದರು. ಉಳಿದ ಸದಸ್ಯರು ಎಲ್ಲಿ ಎಂದು ಪಿಡಿಒಗೆ ಪ್ರಶ್ನಿಸಿದಾಗ ಎಲ್ಲರಿಗೂ ಸಭೆಗೆ ಆಹ್ವಾನಿಸಲಾಗಿದೆ. ಆದರೆ ಬಂದಿಲ್ಲ ಎಂದರು. ಆಗ ಗ್ರಾಮಸ್ಥರು ಸಭೆ ನಡೆಸಬಾರದು ಎಂದು ಪಟ್ಟು ಹಿಡಿದರು.

ಸದಸ್ಯರಿಗೆ ಅವರ ಅಧಿಕಾರ ವ್ಯಾಪ್ತಿ, ಕರ್ತವ್ಯಗಳ ಬಗ್ಗೆ ತರಬೇತಿ ನೀಡಿದರೂ ಸಭೆಗಳಿಗೆ ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದಾರೆ. ಇವರ ಬೇಜವಾಬ್ದಾರಿಯಿಂದ ಗ್ರಾಮ ಅಭಿವೃದ್ಧಿಯಲ್ಲಿ ಕುಂಠಿತಗೊಂಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪಿಡಿಒ ಎ.ಎಫ್. ಗೋಣಾಗರ ಮಾತನಾಡಿ, ಸಭೆಗೆ ಬರುವಂತೆ ಎಲ್ಲ ಸದಸ್ಯರಿಗೂ ನೋಟಿಸ್ ನೀಡಲಾಗಿದೆ. ಫೋನ್ ಮುಖಾಂತರವೂ ತಿಳಿಸಲಾಗಿದೆ. ಆದರೂ ಬರದೆ ಇರುವುದು ಬೇಸರದ ಸಂಗತಿ. ಗ್ರಾಮಸ್ಥರ ಬೇಡಿಕೆಯಂತೆ ಅಧ್ಯಕ್ಷರೊಂದಿಗೆ ಮಾತನಾಡಿ ಮತ್ತೊಮ್ಮೆ ಸದಸ್ಯರ ಸಭೆ ಕರೆಯುತ್ತೇನೆ ಎಂದು ಮನವಿ ಮಾಡಿದ ಹಿನ್ನೆಲೆಯಲ್ಲಿ ಸಭೆಯನ್ನು ಮೊಟಕುಗೊಳಿಸಲಾಯಿತು.

ನಂತರ ಗ್ರಾಮಸ್ಥ ಪ್ರಕಾಶಗೌಡ ಪಾಟೀಲ ಸುದ್ದಿಗಾರರೊಂದಿಗೆ ಮಾತನಾಡಿ, ಒಂದು ವರ್ಷದಿಂದ ವಾರ್ಡ್ ಸಭೆ ಕರೆದಿಲ್ಲ. ಈ ಸಭೆಗೂ ಗ್ರಾಮಸ್ಥರನ್ನು ಮುಂಚಿತವಾಗಿ ಆಹ್ವಾನಿಸಿಲ್ಲ, ಕಾಟಾಚಾರಕ್ಕೆ ಸಭೆ ಕರೆಯಲಾಗಿದೆ. ಸದಸ್ಯರು ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಗ್ರಾಮದಲ್ಲಿ ಸಮರ್ಪಕ ಅಭಿವೃದ್ಧಿ ಕಾಣದೇ ಹಿಂದುಳಿದ ಗ್ರಾಮದಂತಾಗಿದೆ. ಇದೇ ರೀತಿ ಮುಂದುವರಿದರೆ ತಹಸೀಲ್ದಾರ್‌ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಮಲ್ಲಿಕಾರ್ಜುನ ಅಂಗಡಿ, ಶರೀಫಶಿ ವಯೋಗಿ ವೀರಪ್ಪನವರ, ಬಸವರಾಜ್ ಮೇಟಿ, ಚನ್ನಬಸಪ್ಪ ನವಲಗುಂದ, ಭೀಮಪ್ಪ ಕನಕನವರ, ಶೇಖರಪ್ಪ ಮರಕುಂಬಿ, ಗ್ವಾಲಪ್ಪ ತಳವಾರ, ಮೋನಯ್ಯ ಹಿರೇಮಠ, ಬಸಯ್ಯ ಹಿರೇಮಠ ಸೇರಿದಂತೆ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯ ವಿಶೇಷ ಚೇತನ ಮಕ್ಕಳ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದ ಹುಬ್ಬಳ್ಳಿಯ ಡಾ. ಪಿ.ವಿ. ದತ್ತಿ ರೋಟರಿ ಕಿವುಡ ಮಕ್ಕಳ ಶಾಲೆ